ಶ್ರೀ ಜೆ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

1. ಎಣ್ಣೆಕಾಳು ಉತ್ಪಾದನೆ ಹೆಚ್ಚು ಮಾಡಲು ಕೈಗೊಂಡಿರುವ ಕ್ರಮಗಳು.

ಅ) ಆಧುನಿಕ ಬೇಸಾಯ ಕ್ರಮಗಳನ್ನು ಅಳವಡಿಸಿ ಅಧಿಕ ಉತ್ಪಾದನೆ ಪಡೆಯುವುದರಲ್ಲಿ ರೈತರಿಗೆ ಮಾಹಿತಿ ಹಾಗೂ ತರಬೇತಿ ಕೊಡುವುದು.

ಆ) ಮಳೆಯಾಶ್ರಯದಲ್ಲಿ ನೂತನ ಖುಷ್ಕಿ ಬೇಸಾಯ ಕ್ರಮಗಳನ್ನು ಅನುಸರಿಸಿ ಮೇಲ್ಮಣ್ಣಿನ ಸಂರಕ್ಷಣೆಯನ್ನು ಮತ್ತು ಭೂಮಿಯಲ್ಲಿ ತೇವಾಂಶ ಕಾಪಾಡುವುದರ ಮೂಲಕ ಮಣ್ಣಿನ ಫಲವತ್ತತೆ ಹೆಚ್ಚಿಸುವುದು.

ಇ) ಕೆರೆ ಅಣೆಕಟ್ಟು ಹಾಗೂ ಅಚ್ಚುಕಟ್ಟು ಪ್ರದೇಶದಲ್ಲಿ ಭತ್ತ ಬೆಳೆಸಲು ಸಾಕಷ್ಟು ನೀರು ಇಲ್ಲದಿದ್ದರೆ ಭತ್ತದ ಬದಲು ಎಣ್ಣೆಕಾಳುಗಳನ್ನು ಅರೆ ನೀರಾವರಿ ಬೆಳೆಯಾಗಿ ಬೆಳೆಯುವುದು.

ಈ) ಎಣ್ಣೆಕಾಳು ಬೆಳೆಯನ್ನು ಮಿಶ್ರ ಹಾಗೂ ಬಹು ಬೆಳೆಯಾಗಿ ಬೆಳೆಯುವುದು ಮತ್ತು ಬೆಳೆ ಪರಿವರ್ತನೆಯಲ್ಲಿ ಪರ್ಯಾಯ ಬೆಳೆಯಾಗಿ ಅಳವಡಿಸುವುದು.

ಉ) ಭತ್ತದ ಕೊಯಿಲಿನ ನಂತರ ಭೂಮಿಯಲ್ಲಿನ ಉಳಿಕ ತೇವಾಂಶದಲ್ಲಿ ನೆಲಗಡಲೆ ಬೆಳೆಸುವುದು.

ಊ) ಈ ದಿಸೆಯಲ್ಲಿ ರೈತರನ್ನು ಎಣ್ಣೆಕಾಳು ಬೆಳೆಯುವ ಬಗ್ಗೆ ಉತ್ತೇಜಿಸಲು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಎಣ್ಣೆಕಾಳು ಅಭಿವೃದ್ಧಿ ಯೋಜನೆ ಮತ್ತು ಎಣ್ಣೆಕಾಳ ಉತ್ಪಾದನೆ ಒತ್ತು ಯೋಜನೆಗಳಡಿಯಲ್ಲಿ ಅವರಿಗೆ ಅಧಿಕ ಇಳುವರಿ ಗುಣಮಟ್ಟದ ಬಿತ್ತನ ಬೀಜಗಳನ್ನು ಮುಂಗಡವಾಗಿ ಒದಗಿಸುವುದು, ಸಸ್ಯ ಸಂರಕ್ಷಣಾ ರಾಸಾಯನಿಕಗಳು ಮತ್ತು ಉಪಕರಣಗಳು, ಸುಧಾರಿತ ಕೃಷಿ ಸಲಕರಣೆಗಳು, ಜಿಪ್ಸಂ, ತುಂತುರು ನೀರಾವರಿ ಯಂತ್ರಗಳು ಮುಂತಾದವುಗಳನ್ನು ರಿಯಾಯಿತಿ ದರದಲ್ಲಿ ಒದಗಿಸಿ ಕೊಡಲಾಗುತ್ತಿದೆ. ಇಷ್ಟೇ ಅಲ್ಲದೆ ಸುಧಾರಿತ ಗುಣಮಟ್ಟದ ಎಣ್ಣೆಕಾಳು ಬಿತ್ತನೆ ಬೀಜಗಳನ್ನೊಳಗೊಂಡ ಕಿರು ಚೀಲಗಳನ್ನು ರೈತರಿಗೆ ಅದರಲ್ಲೂ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಆದ್ಯತೆ ಮೇಲೆ ಉಚಿತವಾಗಿ ವಿತರಿಸಲಾಗುವುದು. ಇದರ ಜೊತೆಗೆ ಹಣಕಾಸಿನ ಸಂಸ್ಥೆಗಳ ಮೂಲಕ ಎಣ್ಣೆಕಾಳು ಉತ್ಪಾದನೆಗೆ ವಿಶೇಷ ಬೆಳೆ ಸಾಲ ಸೌಲಭ್ಯದ ವ್ಯವಸ್ಥೆ ಸಹ ಮಾಡಲಾಗಿದೆ.

2) ಶಿವಮೊಗ್ಗ ಜಿಲ್ಲೆಯ ಭದ್ರಾ ಅಚ್ಚುಕಟ್ಟು ಪ್ರದೇಶದ 1000 ಹೆಕ್ಟೇರ್ ಪ್ರದೇಶವನ್ನು ತಾಳೆಮರ ಪ್ರಯೋಗಾತ್ಮಕ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದೆ. ಇದು ಒಂದು ಕೇಂದ್ರ ಸರಕಾರದ ಯೋಜನೆಯಾಗಿದ್ದು, ಬಯೋಟೆಕ್ನಾಲಜಿ ಇಲಾಖೆಯ 50:50 ಆಧಾರದ ಸಹಾಯದ ಮೇಲೆ ಕಾರ್ಯಗತಗೊಳಿಸಲಾಗುತ್ತದೆ. ಈ ಯೋಜನೆಯ ಒಟ್ಟು ಮೊತ್ತ 715.48 ಲಕ್ಷಗಳು, ಮತ್ತು ಅವಧಿಯು 1988-89ರಿಂದ 5 ವರ್ಷಗಳು. ಈ ಯೋಜನೆಯಲ್ಲಿ, 1000 ಹೆಕ್ಟೇರ್ ಗುರಿಯನ್ನು ಹೊಂದಿದ್ದು, ಅದರಲ್ಲಿ ಈಗಾಗಲೇ 870 ಹೆಕ್ಟೇರ್ ಬೆಳೆಗಾರರ ಜಮೀನಿನಲ್ಲಿ ತಾಳೆ ಮರ ನೆಡಲಾಗಿದೆ.

8ನೇ ಯೋಜನೆಯಲ್ಲಿ ಕೇಂದ್ರ ಸರಕಾರದ ಸಹಾಯದೊಂದಿಗೆ ತಾಳೆ ಮರವನ್ನು ಹೆಚ್ಚಿನ ಪ್ರದೇಶದಲ್ಲಿ ಬೆಳೆಯಲು ಉದ್ದೇಶಿಸಲಾಗಿದೆ. 5000 ಹೆಕ್ಟೇರ್ ಗುರಿಯನ್ನು ನಿಗದಿ ಪಡಿಸಲಾಗಿದೆ ಮತ್ತು ಈ ದಿಸೆಯಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ.

ರಾಜ್ಯದಲ್ಲಿ ಸರಕಾರಿ ನಿಯಂತ್ರಣದಲ್ಲಿರುವ ದೇವಾಲಯಗಳ ಸಂಖ್ಯೆ

50 - ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್, (ಕುಂದಗೋಳ): ಮಾನ್ಯ

ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಸರಕಾರೀ ನಿಯಂತ್ರಣದಲ್ಲಿರುವ ದೇವಾಲಯಗಳ ಸಂಖ್ಯೆ ಎಷ್ಟು? ಇವುಗಳ ತಲಾ ಆದಾಯ ಮತ್ತು ವೆಚ್ಚವೆಷ್ಟು?

ಆ) ಈ ದೇವಾಲಯಗಳಲ್ಲಿ ಎಲ್ಲರಿಗೂ ಮುಕ್ತ ಪ್ರದೇಶವಿರುವ ದೇವಾಲಯಗಳ ಸಂಖ್ಯೆ ಎಷ್ಟು ಹಾಗೂ ಪ್ರತಿ ಕ್ಷೇತ್ರಗಳಿಗೂ ಬರುವ ವಾರ್ಷಿಕ ಭಕ್ತಾದಿಗಳ ಸಂಖ್ಯೆ ಎಷ್ಟು ಹಾಗೂ ಭಕ್ತಾದಿಗಳ ಸಂಖ್ಯೆಯನ್ನು ಗುರುತಿಸುವ ಮಾಪನ ಯಾವುದು?

ಇ) ಪ್ರತಿ ವರ್ಷ 8-10 ಲಕ್ಷ ಜನ ಸೇರುವ ಮೈಲಾರು ಕ್ಷೇತ್ರದಲ್ಲಿ ಸ್ನಾನ ಘಟ್ಟಗಳನ್ನೇನಾದರೂ ನಿರ್ಮಿಸಲಾಗಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ದೇವಾಲಯಗಳ ಸಂಖ್ಯೆ: 41366 ಆದಾಯ ರೂ. 15,02,89, 083-00 ವೆಚ್ಚ ರೂ. 12,23,33,596-00

ಆ) ಮುಜರಾಯಿ ಇಲಾಖೆಯ ನಿಯಂತ್ರಣದಲ್ಲಿರುವ ಎಲ್ಲಾ ದೇವಾಲಯಗಳಿಗೆ ಮುಕ್ತ ಪ್ರದೇಶವಿದೆ. ಮಾಪನ ಇಲ್ಲದಿರುವುದರಿಂದ, ಭಕ್ತಾದಿಗಳ ಸಂಖ್ಯೆಯನ್ನು ನಿಖರವಾಗಿ ತಿಳಿಸುವುದು ಕಷ್ಟ ಸಾಧ್ಯ.

ಇ) ಇಲ್ಲ.

ಕೃಷಿ ಇಲಾಖೆಯ ವಾಹನಗಳ ಹರಾಜು

300 - ಶ್ರೀ ಉಮಾಪತಿ (ಹೊಳಲ್ಕೆರೆ): ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಇಲಾಖೆಯಲ್ಲಿ ಹಾಲಿ ಇರುವ ವಾಹನಗಳ ಸಂಖ್ಯೆ ಎಷ್ಟು?

ಆ) ಆ ಪೈಕಿ ಈಗ ಚಾಲ್ತಿಯಲ್ಲಿರುವ ಹಾಗೂ ದುರಸ್ತಿಯಲ್ಲಿರುವ ವಾಹನಗಳ ಸಂಖ್ಯೆ ಎಷ್ಟು?

ಇ) ದುರಸ್ತಿಯಲ್ಲಿರುವ ವಾಹನಗಳನ್ನು ಹರಾಜು ಮಾಡಲಾಗುವುದೇ ಅಥವಾ ದುರಸ್ತಿ ಮಾಡಿಸಲಾಗುವುದೇ?

ಈ) ಕೃಷಿ ಇಲಾಖೆಗೆಂದೇ ವಾಹನಗಳನ್ನು ಖರೀದಿಸುವ ಪ್ರಸ್ತಾವನೆ ಏನಾದರೂ ಇದೆಯೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) 554

ಆ) ಚಾಲ್ತಿಯಲ್ಲಿ 450 ಹಾಗೂ ದುರಸ್ತಿಯಲ್ಲಿ 104 ವಾಹನಗಳು ಇರುತ್ತವೆ..

ಇ) ಅನೇಕ ವರ್ಷಗಳ ಹಳೆಯದಾದ ಮತ್ತು ಆರ್ಥಿಕವಾಗಿ ಸರ್ಕಾರಕ್ಕೆ ಲಾಭದಾಯಕವಾಗಿ ಚಲಿಸದೇ ಅನುಪಸ್ಥಿತಿಯಲ್ಲಿರುವ ವಾಹನಗಳನ್ನು ನಿಯಮನುಸಾರ ವಿಲೇವಾರಿ ಮಾಡಲಾಗುತ್ತಿದೆ ಮತ್ತು ಲಾಭದಾಯಕವಾಗಿ ಓಡಾಡಬಲ್ಲ ವಾಹನಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಮೇರೆಗೆ ದುರಸ್ತಿಪಡಿಸಿ ಉಪಯೋಗಿಸಲಾಗುವುದು.

ಈ) ಪ್ರಸಕ್ತ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಸ್ತರಣಾ ಯೋಜನೆ-2ರ ಅಡಿಯಲ್ಲಿ ಕೆಲವು ವಾಹನಗಳನ್ನು ಖರೀದಿಸುವ ಬಗ್ಗೆ ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ.

ಕೊಳಚೆ ನಿರ್ಮೂಲನಾ ಮಂಡಲಿಯ ಆಶ್ರಯದಲ್ಲಿ ಕಟ್ಟುತ್ತಿರುವ ಮನೆಗಳ ಸಂಖ್ಯೆ.

760 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ